**ಸಾಕ್ಷಿಯನ್ನು ದಿ: 21.10.2019 ರಂದು ಪುನ: ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ವಿಶೇಷ ಪಿ ಪಿ ರವರಿಂದ**

25. ದಿ: 11.11.2014 ರಂದು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಚಿತ್ರದುರ್ಗ ರವರುಗೆ ಷೆಡ್ಯೂಲ್ 1 ರಿಂದ 23 ಭರ್ತಿ ಮಾಡಿ ನೀಡುವ ಬಗ್ಗೆ ಪತ್ರ ಬರೆದೆನು. ದಿ: 16.06.2015 ರಂದು ಕಾರ್ಮಿಕ ಆಯುಕ್ತರವರ ಕಛೇರಿ, ಬೆಂಗಳೂರು ರವರಿಗೆ ರಾಜಣ್ಣರವರಿಗೆ ಸಂಬಂಧ ಪಟ್ಟ ಷೆಡ್ಯೂಲ್ 1 ರಿಂದ 23 ಭರ್ತಿ ಮಾಡಿ ನೀಡುವ ಬಗ್ಗೆ ಪತ್ರ ಬರೆದೆನು. ದಿ: 04.07.2015 ರಂದು ರಾಜೇಶ್ವರಿ ಮತ್ತು ರಾಜಣ್ಣ ಅಂದರೆ 1 ಮತ್ತು 2 ನೇ ಆರೋಪಿತರ 1 ರಿಂದ 23 ರ ನಮೂನೆಯನ್ನು ಭರ್ತಿ ಮಾಡಿ ಕಳುಹಿಸಿಕೊಟ್ಟದ್ದನ್ನು ಸ್ವೀಕರಿಸಿದೆನು. ಅದರಲ್ಲಿ ನಮೂದಿಸಿರುವಂತೆ ರೂ. 17,01,184/– ಮಾತ್ರ ಹೆಚ್ಚುವರಿ ಆದಾಯ ಇರುವುದಾಗಿ ತಿಳಿಸಿದ್ದು, ಅದು ಸರಿ ಇರಲಿಲ್ಲ. ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಚಿತ್ರದುರ್ಗ ರವರಿಗೆ ಬರೆದ ಪತ್ರ ನೋಡುತ್ತಿದ್ದು ಗುರುತಿಸುತ್ತೇನೆ. ಅದನ್ನು ನಿಪಿ 166 ಸಾಕ್ಷಿ ಸಹಿ ನಿಪಿ 166(ಎ) ಅಂತ ಗುರುತಿಸಲಾಯಿತು. 1 ಮತ್ತು 2 ನೇ ಆರೋಪಿತರು 1 ರಿಂದ 23 ರ ನಮೂನೆಯನ್ನು ಭರ್ತಿ ಮಾಡಿ ಕಳುಹಿಸಿದ್ದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಅದು ಕಡತ 3 ಅನುಬಂಧ 1 ಆಗಿದೆ. ಅದನ್ನು ನಿಪಿ 167 ಅಂತ ಗುರುತಿಸಲಾಯಿತು. ಅದರೊಂದಿಗೆ ಕಾರ್ಮಿಕ ಆಯುಕ್ತರು, ಬೆಂಗಳೂರುರವರು ಎ ಡಿ ಜಿ ಪಿ ರವರಿಗೆ ಕಳುಹಿಸಿಕೊಟ್ಟ ಪತ್ರ ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಅದನ್ನು ನಿಪಿ 168 ಅಂತ ಗುರುತಿಸಲಾಯಿತು. ಐ.ಜಿ ಪಿ ರವರು ನಿಪಿ 167 ರ ಕಡತದೊಂದಿಗೆ ಕಳುಹಿಸಿದ ಪತ್ರ ಈಗ ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ 169 ಸಾಕ್ಷಿ ಸಹಿ ನಿಪಿ 169(ಎ) ಅಂತ ಗುರುತಿಸಲಾಯಿತು. ಇದಕ್ಕೆ ಪೂರಕವಾದ ದಾಖಲೆಗಳ ಅನುಬಂಧ 2 ಕಡತ 4 ಆಗಿದ್ದು, ಅದನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಅದನ್ನು ನಿಪಿ 170 ಅಂತ ಗುರುತಿಸಲಾಯಿತು. ಈ ಅನುಬಂಧದ ವಿವರಗಳು ಸುಳ್ಳಿನಿಂದ ಕೂಡಿವೆ.

26. ದಿ: 16.12.2014 ರಂದು ಎರಡನೇ ಆರೋಪಿತೆ ರಾಜೇಶ್ವರಿಗೆ ಸಂಬಂಧಿಸಿದ ಚಿತ್ರದುರ್ಗ ನಗರದ ಯಂಗಮ್ಮನಕಟ್ಟೆ, ಖಾತೆ ನಂ. 10, 888, ಅಸೆಸ್ ಮೆಂಟ್ ನಂ.

18673/01 ರಲ್ಲಿ ವಿಸ್ತೀರ್ಣ 46 ಇಂಟು 55 ಅಡಿಯ ನಿವೇಶನವನ್ನು ಖರೀದಿಸಿ ಮನೆಯನ್ನು ನಿರ್ಮಾಣ ಮಾಡಿರುವುದು ಹಾಗೂ ತಮ್ಮ ಹೆಸರಿನಲ್ಲಿ ಕೆ.ಎ. 16/ಎಂ. 6346 ಹುಂಡಾಯ್ ಐ 20 ಕಾರನ್ನು ಖರೀದಿ ಮಾಡಲು ಇರುವ ಆದಾಯದ ಮೂಲವನ್ನು ಒದಗಿಸುವಂತೆ ಕೋರಿ ಪತ್ರ ಬರೆದೆನು. ಸದರಿ ಪತ್ರ ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ 171 ಸಾಕ್ಷಿ ಸಹಿ ನಿಪಿ 171(ಎ) ಅಂತ ಗುರುತಿಸಲಾಯಿತು.

27. ದಿ: 06.06.2014 ರಂದು ಒಂದನೇ ಆರೋಪಿಯ 2014 ರವರೆಗಿನ ಆದಾಯ ತೆರಿಗೆ ಪಾವತಿ ಮಾಡಿದ ಬಗ್ಗೆ ವಿವರಣೆ ನೀಡುವಂತೆ ಕೋರಿ ತೆರಿಗೆ ಅಧಿಕಾರಿಗಳು, ದಾವಣಗೆರೆರವರಿಗೆ ದಿ: 06.06.2014 ರಂದು ಪತ್ರ ಬರೆದೆನು. ದಿ: 04.09.2014 ರಂದು ಕಾರ್ಮಿಕ ಅಧಿಕಾರಿ, ಚಿತ್ರದುರ್ಗ ರವರಿಗೆ ಪತ್ರ ಬರೆದು ಆಪಾದಿತರ 2006 ರಿಂದ 2014 ನೇ ಸಾಲಿನ ಆಸ್ತಿ ದಾಯತ್ವದ ಬಗ್ಗೆ ಧೃಡೀಕೃತ ಪತ್ರಗಳನ್ನು ಸ್ವೀಕರಿಸುತ್ತೇನೆ. ಸದರಿ ಪತ್ರ ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ 172 ಸಾಕ್ಷಿ ಸಹಿ ನಿಪಿ 172(ಎ) ಅಂತ ಗುರುತಿಸಲಾಯಿತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ದಿ: 28.11.2016 ರಂದು ಸ್ವೀಕರಿಸಿದ ಪತ್ರ ಈಗ ನೋಡುತ್ತಿದ್ದೇನೆ. ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ 173 ಸಾಕ್ಷಿ ಸಹಿ ನಿಪಿ 173(ಎ) ಅಂತ ಗುರುತಿಸಲಾಯಿತು.

28. 2003 ರಿಂದ 2014 ರವರೆಗೆ ಎರಡನೇ ಆರೋಪಿಯ ಆಸ್ತಿ ಮತ್ತು ದಾಯತ್ವದ ದಾಖಲೆಗಳನ್ನು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಚಿತ್ರದುರ್ಗ ರವರು ಕಳುಹಿಸಿದ್ದು, ಸದರಿ ದಾಖಲೆಗಳನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಅವು ಪುಟ ಸಂ. 13 ರಿಂದ 30 ರವರೆಗೆ ಇರುವ ದಾಖಲೆಯನ್ನು ನಿಪಿ 174 ಅಂತ ಗುರುತಿಸಲಾಯಿತು. ಕಾರ್ಮಿಕ ಅಧಿಕಾರಿಗಳು, ಚಿತ್ರದುರ್ಗ ಜಿಲ್ಲೆಯವರು ನೀಡಿದವರು ನೀಡಿದ ಒಂದನೇ ಅರೋಪಿಗೆ ಸಂಬಂಧಿಸಿದ 2006 ರಿಂದ 2014 ನೆ ಸಾಲಿನಆಸ್ತಿ ಮತ್ತು ದಾಯತ್ವದ ಧೃಡೀಕೃತ ದಾಖಲೆಗಳ ಪ್ರತಿಗಳನ್ನು ಸ್ವೀಕರಿಸಿದ್ದು ಅವು ಪು.ಸಂ. 1 ರಿಂದ 12 ರಲ್ಲಿ ಇವೆ. ಅವುಗಳನ್ನು ಒಟ್ಟಿಗೆ ನಿಪಿ 175 ಅಂತ ಗುರುತಿಸಲಾಯಿತು. ಒಂದನೇ ಅರೋಪಿತ ಹೊಂದಿರುವ ಪಾನ್ ನಂಬರ್ ಎಕ್ಯೂಇ ಪಿ ಆರ್ 7909 ಕೆ ರ ಬಗ್ಗೆ ಕಮೀಷನರ್, ಇನ್ ಕಮ್ ಟ್ಯಾಕ್ಸ್ ರವರಿಗೆ ಪತ್ರ ಬರೆದಿದ್ದು ಅವರಿಂದ ದಿ:

31.07.2014 ರಂದು ಉತ್ತರವನ್ನು ಸ್ವೀಕರಿಸಿದೆನು. ಈ ಕುರಿತು ನಾನು ಬರೆದ ಪತ್ರ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ 176 ಸಾಕ್ಷಿ ಸಹಿ ನಿಪಿ 176 (ಎ) ಅಂತ ಗುರುತಿಸಲಾಯಿತು. ಅದೇ ದಿನ ಎರಡನೇ ಆರೋಪಿ ರಾಜೇಶ್ವರಿಯವರ ಪಾನ್ ನಂ ಎ ಹೆಚ್ ಎನ್ ಪಿ ಆರ್ 3143 ಎಫ್ ರ ಬಗ್ಗೆ ಕಮೀಷನರ್, ಇನ್ ಕಮ್ ಟ್ಯಾಕ್ಸ್ ರವರಿಗೆ ತೆರಿಗೆ ಸಲ್ಲಿಸಿರುವ ಕುರಿತು ಪತ್ರ ಬರೆದಿದ್ದು ಗುರುತಿಸುತ್ತೇನೆ. ಅದನ್ನು ನಿಪಿ 177 ಸಾಕ್ಷಿ ಸಹಿ ನಿಪಿ 177(ಎ) ಅಂತ ಗುರುತಿಸಲಾಯಿತು. ದಿ: 30.07.2014 ರಂದು ಸದರಿ ಪಾನ್ ಕಾರ್ಡಿನ ಬಗ್ಗೆ ವಿವರವನ್ನು ಸ್ವೀಕರಿಸಿರುತ್ತೇನೆ. ಸದರಿಯವರಿಂದ ಬಂದ ಉತ್ತರ ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ 178 ಸಾಕ್ಷಿ ಸಹಿ ನಿಪಿ 178(ಎ) ಅಂತ ಗುರುತಿಸಲಾಯಿತು.

29. ದಿ: 25.05.2015 ರಂದು ಇನ್ ಕಮ್ ಟ್ಯಾಕ್ಸ್ ಕಮಿಷನರ್ ದಾವಣಗೆರೆ ರವರಿಗೆ ಪತ್ರ ಬರೆದು ಪಾನ್ ಕಾರ್ಡಿಗಳ ಜೊತೆಗೆ ಇದ್ದ ಲಗತ್ತುಗಳ ಧೃಢೀಕೃತ ನಕಲನ್ನು ನೀಡುವಂತೆ ಕೋರಿದೆನು. ಸದರಿ ಪತ್ರಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ 179 ಮತ್ತು 180 ಅಂತ ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ 179(ಎ) ಮತ್ತು 180(ಎ) ಅಂತ ಕ್ರಮವಾಗಿ ಗುರುತಿಸಲಾಯಿತು. ದಿ: 04.06.2015 ರಂದು ಧೃಡೀಕೃತ ಪ್ರತಿಗಳನ್ನು ಒದಗಿಸಿದ್ದು ಅವುಗಳನ್ನು ಸ್ವೀಕರಿಸಿದೆನು. ಎರಡು ಆರೋಪಿತರ ಪಾನ್ ಕಾರ್ಡಿನ ಜೆರಾಕ್ಸ್ ನ್ನು ಪತ್ರದೊಂದಿಗೆ ಕಳುಹಿಸಿರುತ್ತಾರೆ. ಸದರಿಪತ್ರ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ 181 ಪಾನ್ ಕಾರ್ಡ್ ನಕಲುಗಳನ್ನು ನಿಪಿ 182 ಮತ್ತು 183 ಅಂತ ಗುರುತಿಸಲಾಯಿತು. ದಿ: 17.11.2015 ರಂದು ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ಇಲಾಖೆ, ಚಿತ್ರದುರ್ಗ ರವರಿಗೆ ಪತ್ರ ಬರೆದು ಒಂದನೇ ಆರೋಪಿಯ ಸೇವಾ ವಿವರವನ್ನು ಕೋರಿ ಪತ್ರ ಬರೆದೆನು. ದಿ: 18.11.2015 ರಂದು ಉತ್ತರ ಬಂದಿದ್ದು, ದಿ: 23.11.2015 ರಂದು ಅದನ್ನು ಸ್ವೀಕರಿಸಿದೆನು. ನಾನು ಅವರಿಗೆ ಬರೆದ ಪತ್ರ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ 184 ಸಾಕ್ಷಿ ಸಹಿ ನಿಪಿ 184(ಎ) ಅಂತ ಗುರುತಿಸಲಾಯಿತು. ಸದರಿಯವರು ಕಳುಹಿಸಿದ ಮಾಹಿತಿ ಪತ್ರ ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಅದನ್ನು ನಿಪಿ ನಿಪಿ 185 ಸಾಕ್ಷಿ ಸಹಿ ನಿಪಿ 185(ಎ) ಅಂತ ಗುರುತಿಸಲಾಯಿತು.

30. ದಿ: 03.02.2015 ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ಇಲಾಖೆ, ಚಿತ್ರದುರ್ಗ ರವರಿಗೆ ಪತ್ರ ಬರೆದು ಒಂದನೇ ಆರೋಪಿ ರಾಜಣ್ಣನ ಸೇವಾ ಪುಸ್ತಕದ ದೃಡೀಕೃತ ಪ್ರತಿಯನ್ನು ನೀಡುವಂತೆ ಕೋರಿದೆನು. ದಿ: 07.02.2015 ರಂದು ಸೇವಾ ಪುಸ್ತಕದ ಧೃಢೀಕೃತ ನಕಲನ್ನು ಸ್ವೀಕರಿಸಿದೆನು. ನಾನು ಕಳುಹಿಸಿದ ಪತ್ರ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ 186 ಸಾಕ್ಷಿ ಸಹಿ ನಿಪಿ 186(ಎ) ಅಂತ ಗುರುತಿಸಲಾಯಿತು. ಸದರಿಯವರು ಕಳುಹಿಸಿದ ಸೇವಾ ಪುಸ್ತಕದ ನಕಲನ್ನು ನೋಡುತ್ತಿದ್ದು ಅದು ಪು.ಸಂ. 51 ರಿಂದ 73 ಇದ್ದು ಅದನ್ನು ನಿಪಿ 187 ಅಂತ ಗುರುತಿಸಲಾಯಿತು. ನಿಪಿ 187 ರ ಜೊತೆ ಪತ್ರ ಲಗತ್ತಿಸಿದ್ದು ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ 188 ಸಾಕ್ಷಿ ಸಹಿ ನಿಪಿ 188(ಎ) ಅಂತ ಗುರುತಿಸಲಾಯಿತು.

31. ದಿ: 17.11.2015 ರಂದು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಚಿತ್ರದುರ್ಗರವರಿಗೆ ಪತ್ರ ಬರೆದು ಎರಡನೇ ಆರೋಪಿಯ ಸೇವಾ ವಿವರವನ್ನು ನೀಡುವಂತೆ ಕೋರಿ ಪತ್ರ ಬರೆದೆನು. ದಿ: 19.11.2015 ರಂದು ನಿಗದಿತ ನಮೂನೆಯಲ್ಲಿ ಅವರ ಸೇವಾ ವಿವರವನ್ನು ಪತ್ರದೊಂದಿಗೆ ಒದಗಿಸಿದರು. ನಾನು ಅವರಿಗೆ ಬರೆದ ಪತ್ರ ನೋಡುತ್ತಿದ್ದು ಅದನ್ನು ನಿಪಿ 189 ಸಾಕ್ಷಿ ಸಹಿ ನಿಪಿ 189(ಎ) ಅಂತ ಗುರುತಿಸಲಾಯಿತು. ಸದರಿಯವರು ಕಳುಹಿಸಿದ ಸೇವಾ ವಿವರ ನೋಡುತ್ತಿದ್ದು ಅದನ್ನು ನಿಪಿ 190 ಸಾಕ್ಷಿ ಸಹಿ ನಿಪಿ 190(ಎ) ಅಂತ ಗುರುತಿಸಲಾಯಿತು. ನಿಪಿ 190 ರ ಜೊತೆ ಪತ್ರ ಲಗತ್ತಿಸಿದ್ದು ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ 191 ಸಾಕ್ಷಿ ಸಹಿ ನಿಪಿ 191(ಎ) ಅಂತ ಗುರುತಿಸಲಾಯಿತು.

32. ದಿ: 03.02.2015 ರಂದು ಆರೋಪಿ ರಾಜೇಶ್ವರಿಯವರ ಸೇವಾ ಪುಸ್ತಕದ ಧೃಢೀಕೃತ ಪ್ರತಿಗಳನ್ನು ಒದಗಿಸುವಂತೆ ಕೋರಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಚಿತ್ರದುರ್ಗ ರವರಿಗೆ ಪತ್ರ ಬರೆದೆನು. ಸದರಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ 192 ಸಾಕ್ಷಿ ಸಹಿ ನಿಪಿ 192(ಎ) ಅಂತ ಗುರುತಿಸಲಾಯಿತು. ದಿ: 06.03.2015 ರಂದು ಅವರಿಂದ ಧೃಡೀಕೃತ ಸೇವಾ ಪುಸ್ತಕದ ಪ್ರತಿಗಳು ಬಂದಿದ್ದು ಅದರೊಂದಿಗೆ ಸದರಿಯವರ ಪತ್ರ ಲಗತ್ತಿಸಲಾಗಿದ್ದು, ಪತ್ರ ಗುರುತಿಸುತ್ತೇನೆ. ಅದನ್ನು ನಿಪಿ 193 ಸಾಕ್ಷಿ ಸಹಿ ನಿಪಿ 193(ಎ)

ಅಂತ ಗುರುತಿಸಲಾಯಿತು. ಸೇವಾ ಪುಸ್ತಕದ ದೃಡೀಕೃತ ನಕಲು ನೋಡುತ್ತಿದ್ದು ಅದು ಪು.ಸಂ. 83 ರಿಂದ 115 ಇದ್ದು ಅದನ್ನು ನಿಪಿ 194 ಅಂತ ಗುರುತಿಸಲಾಯಿತು.

33. ದಿ: 20.08.2014 ರಂದು ಒಂದನೆ ಆರೋಪಿಯ ಸಹೋದರನಾದ ಶ್ರೀ ರಾಮಣ್ಣ ಬಿನ ದ್ಯಾಮಣ್ಣ, ಡಿ.ವೀರಣ್ಣ ಬಿನ್ ದ್ಯಾಮಣ್ಣ, ಸಾಕಿನ ಈಶ್ವರಗೆರೆ ಗ್ರಾಮ ಇವರಿಗೆ ಪತ್ರ ಬರೆದು ಹೂವಿನಹೊಳೆ ಗ್ರಾಮದ ಸ.ನಂ. 62/2 ರಲ್ಲಿ 11.16 ಎಕರೆ ಜಮೀನು ಇದ್ದು ಇದನ್ನು ಶ್ರೀ. ವಿ ಪರಮೇಶ್ವರಪ್ಪ ಮತ್ತು ಆತನ ಸಹೋದರ ತಿಪ್ಪೇಸ್ವಾಮಿಯವರಿಂದ ಕ್ರಯಕ್ಕೆ ಪಡೆದಿದ್ದು ಖರೀದಿಯ ಬಗ್ಗೆ ಅವರಿಗೆ ಇರುವ ಆರ್ಥಿಕ ಸಂಪನ್ಮೂಲದ ಬಗ್ಗೆ ವಿವರಣೆ ಕೊಡುವಂತೆ ಕೋರಿ ಪತ್ರ ಬರೆದೆನು. ಸದರಿ ಪತ್ರ ನೋಡುತ್ತಿದ್ದು ಅದನ್ನು ನಿಪಿ 195 ಸಾಕ್ಷಿ ಸಹಿ ನಿಪಿ 195(ಎ) ಅಂತ ಗುರುತಿಸಲಾಯಿತು. ದಿ: 11.11.2014 ರಂದು ಪತ್ರಗಳು ಬಂದಿದ್ದು ಅದನ್ನು ಸ್ವೀಕರಿಸಿರುತ್ತೇನೆ. ಅವರಿಂದ ಪತ್ರಗಳನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಅದನ್ನು ನಿಪಿ 196 ಮತ್ತು 197 ಅಂತ ಸಾಕ್ಷಿ ಸಹಿ ನಿಪಿ 196(ಎ) ಮತ್ತು 197(ಎ) ಅಂತ ಕ್ರಮವಾಗಿ ಗುರುತಿಸಲಾಯಿತು.

34. ದಿ:07.06.2014 ರಂದು ಉಪನೊಂದಾವಣಾಧಿಕಾರಿಗಳು, ಹಿರಿಯೂರುರವರಿಗೆ ಪತ್ರ ಬರೆದು ಒಂದನೇ ಆರೋಪಿ ಹಾಗೂ ಒಂದನೇ ಆರೋಪಿಯ ಪತ್ನಿ, ಮಗ, ಮಗಳ, ಸಹೋದರರುಗಳ ಹೆಸರಿನಲ್ಲಿ ಇರುವ ಜಮೀನುಗಳನ್ನು ಹೊಂದಿದ್ದರೆ ಮಾಹಿತಿಯನ್ನು ನೀಡುವಂತೆ ಕೋರಿ ಪತ್ರ ಬರೆದೆನು. ಸದರಿ ಪತ್ರವನ್ನು ನೋಡುತ್ತಿದ್ದೇನೆ. ಗುರುತಿಸುತ್ತೇನೆ. ಅದನ್ನು ನಿಪಿ 198 ಸಾಕ್ಷಿ ಸಹಿ ನಿಪಿ 198(ಎ) ಅಂತ ಗುರುತಿಸಲಾಯಿತು. ದಿ: 21.08.2014 ರಂದು ಸದರಿಯವರು ಪತ್ರದೊಂದಿಗೆ ಕೊಟ್ಟ ದಾಖಲಾತಿಗಳನ್ನು ಸ್ವೀಕರಿಸಿದೆನು. ಉಪನೊಂದಾವಣಾಧಿಕಾರಿಗಳು, ಹಿರಿಯೂರುರವರು ಕೊಟ್ಟ ಪತ್ರ ನೋಡುತ್ತಿದ್ದು ಅದನ್ನು ನಿಪಿ 199 ಸಾಕ್ಷಿ ಸಹಿ ನಿಪಿ 199(ಎ) ಅಂತ ಗುರುತಿಸಲಾಯಿತು. ಪತ್ರದೊಂದಿಗೆ ಕಳುಹಿಸಿಕೊಟ್ಟ ಡಿ.ರಾಮಣ್ಣ ಮತ್ತು ಡಿ.ವೀರಣ್ಣನವರ ಹೆಸರಿನ್ಲಲಿ ಇದ್ದ ಕ್ರಯಪತ್ರದ ಧೃಢೀಕೃತ ನಕಲು ಇದ್ದು ಅದು ಪು ಸಂ. 4 ರಿಂದ 11 ಆಗಿದ್ದು ಅದನ್ನು ನಿಪಿ 200 ಅಂತ ಗುರುತಿಸಲಾಯಿತು. ಡಿ.ವೀರಣ್ಣ ಮತ್ತು ಡಿ.ರಾಮಣ್ಣ ರವರು ಒಂದನೇ ಆರೋಪಿಗೆ

ಮಾಡಿಕೊಟ್ಟ ದಾನಪತ್ರದ ಧೃಡೀಕೃತ ನಕಲನ್ನು ನೋಡುತ್ತಿದ್ದೇನೆ. ಅದು ಪು.ಸಂ. 12 ರಿಂದ 18 ಆಗಿದೆ. ಅದನ್ನು ನಿಪಿ 201 ಅಂತ ಗುರುತಿಸಲಾಯಿತು.

35. ಚಿತ್ತಮ್ಮ ಕೋಂ ಲೇಟ್ .ಡಿ.ಶಿವಣ್ಣ, ಡಿ.ಈರಣ್ಣ ಬಿನ್ ಲೇ.ದ್ಯಾವಣ್ಣ, ಡಿ.ರಾಮಣ್ಣ ಬಿನ್ ಲೇ.ದ್ಯಾವಣ್ಣ, ಒಂದನೇ ಆರೋಪಿತ ಮಾಡಿಕೊಂಡಂತಹ ಪಾಲು ವಿಭಾಗ ಪತ್ರದ ಧೃಢೀಕೃತ ನಕಲನ್ನು ನೋಡುತ್ತಿದ್ದೇನೆ. ಅದು ಪು.ಸಂ. 19 ರಿಂದ 29 ಇದ್ದು ಅದನ್ನು ನಿಪಿ 202 ಅಂತ ಗುರುತಿಸಲಾಯಿತು. ಡಿ.ಈರಣ್ಣ ಮತ್ತು ಡಿ.ರಾಮಣ್ಣನವರ ಹೆಸರಿನಲ್ಲಿ ಇರುವ ಇ.ಸಿ. ನಕಲು ನೋಡುತ್ತಿದ್ದೇನೆ. ಅದನ್ನು ನಿಪಿ 203 ಅಂತ ಗುರುತಿಸಲಾಯಿತು. ಅದು ಎರಡು ಹಾಳೆಗಳಿಂದ ಕೂಡಿದೆ. ಉಪನೊಂದಾವಣಾಧಿಕಾರಿಗಳು, ಹಿರಿಯೂರಿನಲ್ಲಿ ಈ ಮೇಲಿನ ದಾಖಲೆಗಳು ನೊಂದಾವಣಿ ಆದ ಬಗ್ಗೆ ಮತ್ತು ನೊಂದಣಿ ಫೀ ಕಟ್ಟಿದ ಬಗ್ಗೆ ರಿಜಿಸ್ಟರ್ ಎಕ್ಸ್ ಕ್ರಾಕ್ಟ್ ನಕಲನ್ನು ಪಡೆದಿದ್ದು ನೋಡುತ್ತಿದ್ದೇನೆ. ಅದನ್ನು ನಿಪಿ 204 ಅಂತ ಗುರುತಿಸಲಾಯಿತು. ಅದು ಎರಡು ಹಾಳೆಗಳಿಂದ ಕೂಡಿದೆ. ಡಿ.ವೀರಣ್ಣನವರ ಹೆಸರಿನಲ್ಲಿ ಫೀ ಕಟ್ಟಲಾಗಿದೆ.

36. ದಿ: 07.06.2014 ರಂದು ಉಪನೊಂದಾವಣಾಧಿಕಾರಿಗಳು, ಚಿತ್ರದುರ್ಗರವರಿಗೆ ಪತ್ರಬರೆದು ಎರಡನೇ ಆರೋಪಿತಳ ಯಂಗಮ್ಮನಕಟ್ಟೆಯ ಖಾತೆ ನಂ. 10888, ಅಸೆಸ್ ಮೆಂಟ್ ನಂ 18673/1, ವಿಸ್ತೀರ್ಣ 46 ಇಂಟು 55 ಅಳತೆಯ ನಿವೇಶನದ ಬಗ್ಗೆ ಮಾಹಿತಿ ಹಾಗೂ ದಾಖಲಾತಿಗಳನ್ನು ಕೋರಿ ಪತ್ರ ಬರೆದೆನು. ಸದರಿ ಪತ್ರ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ 205 ಸಾಕ್ಷಿ ಸಹಿ ನಿಪಿ 205(ಎ) ಅಂತ ಗುರುತಿಸಲಾಯಿತು. ದಿ: 28.01.2014 ರಂದು ಮೇಲಿನ ಆಸ್ತಿ ಕುರಿತು ಪತ್ರದೊಂದಿಗೆ ದಾಖಲಾತಿಗಳನ್ನು ಪೂರೈಸಿರುತ್ತಾರೆ. ಸದರಿ ಪತ್ರ ನೋಡುತ್ತಿದ್ದು ಅದನ್ನು ನಿಪಿ 206 ಸಾಕ್ಷಿ ಸಹಿ ನಿಪಿ 206(ಎ) ಅಂತ ಗುರುತಿಸಲಾಯಿತು. ಎರಡನೇ ಆರೋಪಿಯು ಖಾಲಿ ನಿವೇಶನ ಖರೀದಿ ಮಾಡಿದ ಬಗ್ಗೆ ಕ್ರಯ ಪತ್ರದ ದೃಢೀಕೃತ ನಕಲು ನೋಡುತ್ತಿದ್ದು ಗುರುತಿಸುತ್ತೇನೆ., ಅದನ್ನು ನಿಪಿ 207 ಅಂತ ಗುರುತಿಸಲಾಯಿತು. ಆಸ್ತಿ ತೆರಿಗೆ ರಿಜಿಸ್ಟರಿನ ನಕಲನ್ನು ನೋಡುತ್ತಿದ್ದು ಅದನ್ನು ನಿಪಿ 208 ಅಂತ ಗುರುತಿಸಲಾಯಿತು. ಎರಡನೇ ಆರೋಪಿಯ ಹೆಸರಿನಲ್ಲಿದ್ದ ಇ.ಸಿ. ಯ ನಕಲನ್ನುನೋಡುತ್ತಿದ್ದು ಅದನ್ನು ನಿಪಿ 209 ಅಂತ ಗುರುತಿಸಲಾಯಿತು.

ಈಗ ವೇಳೆ 5.00 ಗಂಟೆಯಾಗಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಎಸ್.ವೈ.ವಟವಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿತ್ರದುರ್ಗ